ವಿವರಗಳನ್ನು ನೀಡಬೇಕು. ಮತ್ತು ಇಲ್ಲಿ ಸಾಲ ಸೌಲಭ್ಯವನ್ನೂ ಸಹ ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ ಎಷ್ಟು ಹಣವನ್ನು ಸಾಲದ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಕ್ರಮ ಕೈಗೊಂಡಿದ್ದರೆ ಎಂಬುದನ್ನು ತಿಳಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ 110 ಕೆ.ವಿ. ಸಬ್ ಸ್ಟೇಷನ್ ಅನ್ನು ಮಂಜೂರಾತಿ ಮಾಡಿದ್ದೇವೆ. ಅದಕ್ಕೆ ಸುಮಾರು 1.78 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟಿದ್ದೇವೆ. ಸುಮಾರು 12 ಲಕ್ಷ ರೂಪಾಯಿಗಳನ್ನು ಕೊಟ್ಟು ಭೂಮಿಯನ್ನು ಸಹ ವಶಪಡಿಸಿಕೊಂಡಿದ್ದೇವೆ. ಆದಷ್ಟು ಬೇಗ ಟೆಂಡರ್ ಕರೆದು ಈ ಯೋಜನೆಯನ್ನು 2001 ಮತ್ತು 2002ನೇ ಇಸವಿಯೊಳಗೆ ಕೆಲಸ ಪೂರ್ಣಗೊಳಿಸಬೇಕೆಂದು ಲಿಖಿತ ಮೂಲಕ ಉತ್ತರವನ್ನೂ ಸಹ ಕೊಟ್ಟಿದ್ದೇವೆ. ಆದಷ್ಟು ಬೇಗ ಟೆಂಡರ್ ಕರೆದು ನಾವು ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೇ, ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಧನ್ಯವಾದಗಳು. ಆ ಟೆಂಡರ್ ಪ್ರಕ್ರಿಯೆ ಯಾವಾಗ ಮುಗಿಯುತ್ತದೆ? ನಮ್ಮ ಮಾನ್ಯ ಸಚಿವರು ಬಂದು ಶಂಕುಸ್ಥಾಪನೆಯನ್ನು ಮಾಡಿ ಆದಷ್ಟು ಬೇಗ ಕೆಲಸ ಪ್ರಾರಂಭಿಸಬೇಕೆಂಬುದು ನನ್ನ ಅಪೇಕ್ಷೆ.

ಅಧ್ಯಕ್ಷರು :— ನೋಟಿಫಿಕೇಷನ್ ಇಶ್ಯೂ ಆಗುವುದಕ್ಕಿಂತ ಮುಂಚೆ ಮಾಡಿಬಿಡಿ.

ಪುತ್ತೂರು ನಗರಕ್ಕೆ ಸಂಚಾರಿ ಪೋಲೀಸ್ ವ್ಯವಸ್ಥೆ.

361(2383) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಪುತ್ತೂರು ನಗರದಲ್ಲಿ ದಟ್ಟಣೆಯ ವಾಹನಗಳ ಸಂಚಾರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪುತ್ತೂರು ನಗರಕ್ಕೆ ಸಂಚಾರಿ ಪೋಲೀಸ್ ವ್ಯವಸ್ಥೆಯನ್ನು ಒದಗಿಸುವ ಉದ್ದೇಶ ಸರ್ಕಾರದವರಿಗಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಪಿ.ಜಿ. ಆರ್. ಸಿಂಧ್ಯ (ಗೃಹ ಸಚಿವರು) :—

ಅ) ಹೌದು

ಆ) ಪುತ್ತೂರಿನಲ್ಲಿ ಟ್ರಾಫಿಕ್ ಪೋಲೀಸ್ ಠಾಣೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ನಾನು ಕಳೆದ ಎರಡು ವರ್ಷಗಳ ಹಿಂದೆ ಇದೇ ಪ್ರಶ್ನೆಯನ್ನು ಕೇಳಿದಾಗ ಅಂದಿನ ಮಾನ್ಯ ಗೃಹ ಸಚಿವರು ಇದೇ ಉತ್ತರವನ್ನು ಕೊಟ್ಟಿದ್ದರು. ಬಹುಶಃ ತಾವೂ ಸಹ ಪುತ್ತೂರಿಗೆ ಬಂದಾಗ ತಮಗೂ ಗೊತ್ತಿರಬಹುದು. ಈ ಪುತ್ತೂರು ಅತ್ಯಂತ ವಾಹನ ಸಂಚಾರ ಇರುವಂತಹ ಒಂದು ಸ್ಥಳ. ಮತ್ತು ಅತ್ಯಂತ ಜನ ನಿಬಿಡವಾದ ಸ್ಥಳ ಕೂಡ. ಅಲ್ಲಿ ಒಂದು ಟ್ರಾಫಿಕ್ ಪೋಲೀಸ್ ಠಾಣೆ ಇಲ್ಲದಿದ್ದರೆ ವಾರದ ಹಲವಾರು ದಿನಗಳಲ್ಲಿ ಮಕ್ಕಳು ಶಾಲೆಗಳಿಗೆ ಹೋಗುವಂತಹ ಸಂದರ್ಭದಲ್ಲಿ, ಮತ್ತೊಂದು ಸಂದರ್ಭದಲ್ಲಿ ಸುಮಾರು ಒಂದು ಗಂಟೆ ಟ್ರಾಫಿಕ್ ಜಾಮ್ ಆಗುವಂಥಾದ್ದು ಇದೆ. ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹೆಚ್ಚು ಬಸ್ಸು ಪಾಸ್‌ಗಳನ್ನು ಕೊಡುವಂತಹ ಸೆಂಟರ್ ಪುತ್ತೂರು. ಶಾಲಾ ಮತ್ತು ಕಾಲೇಜು ಮಕ್ಕಳಿಗೆ ಕೊಡುವ ಬಸ್ ಪಾಸ್‌ಗಳು. ಅಷ್ಟು ಜನನಿಬಿಡವಾದ ಸ್ಥಳ ಮತ್ತು ವಾಹನ ಸಂಚಾರ ಇರುವಂತಹ ಸೆಂಟರ್ ಪುತ್ತೂರು. ಬೆಂಗಳೂರು ನಗರ ಬಿಟ್ಟರೆ ಪುತ್ತೂರು ಅತ್ಯಂತ ಹೆಚ್ಚು ಬಸ್ ಪಾಸ್‌ಗಳನ್ನು ಕೊಡುವಂತಹ ಸೆಂಟರ್. ಅಲ್ಲಿಗೆ ಒಂದು ಟ್ರಾಫಿಕ್ ಪೋಲೀಸ್ ಸ್ಟೇಷನ್ ಆಗಬೇಕಾಗಿದೆ. ಕಳೆದ ಸಲ ಸಹ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಪರಿಶೀಲನೆಯ ಅರ್ಥ ಕೂಡ ನಮಗೆ ಅರ್ಥವಾಗುತ್ತಿಲ್ಲ. ಅದಷ್ಟು ಶೀಘ್ರವಾಗಿ ಇದನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೇ, ಇವತ್ತಿನ ಹಣಕಾಸಿನ ಪರಿಸ್ಥಿತಿಯಲ್ಲಿ ಈ ವರ್ಷದಲ್ಲಿ ಹೊಸದಾಗಿ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡತಕ್ಕಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ಆದರೂ ಸಹ 24 ಪೋಲೀಸ್ ಠಾಣೆಗಳನ್ನು ಇನ್ನು 15 ದಿವಸದಲ್ಲಿ ಮಂಜೂರು ಮಾಡಬೇಕೆನ್ನುವ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇದಾದ ಸಂದರ್ಭದಲ್ಲಿ ಸೂಳ್ಯ ಮತ್ತು ಪುತ್ತೂರು ಸೇರಿ ಎರಡು. ಅದರಲ್ಲೂ ಪುತ್ತೂರು ವಿಶೇಷವಾಗಿ ಜನಸಂದಣಿ ಜಾಸ್ತಿ ಇರುವಂತಹ ಜಾಗ. ಟ್ರಾಫಿಕ್ ಪೋಲೀಸ ಸ್ಟೇಷನ್ ಮಾಡತಕ್ಕಂಥದ್ದೋ ಅಥವಾ ಇರುವ ಪೋಲೀಸ್ ಸ್ಟೇಷನ್‌ಗೆ ಹೆಚ್ಚಿಗೆ ಪೋಲೀಸಿನವರನ್ನು ಕೊಟ್ಟು ಸ್ಟೆಂಗ್ತನ್ ಮಾಡಿ ಟ್ರಾಫಿಕ್ ವಿಂಗ್ ತೆಗೆಯುವುದಕ್ಕೆ ಎನಾದರೂ ಒಂದು ಯೋಜನೆ ಮಾಡತಕ್ಕಂಥ ಅವಶ್ಯಕತೆ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಬೈ-ಪಾಸ್ ರಸ್ತೆ ಮಾಡತಕ್ಕಂಥ ಅವಶ್ಯಕತೆ ಕೂಡ ಇದೆ. ಟ್ರಾಫಿಕ್ ಎಯಡ್ ಆದರೂ ತಕ್ಷಣಕ್ಕೆ ಅಲ್ಲಿ ಮಾಡಬೇಕಾಗುತ್ತದೆ. ಈ ಅಧಿವೇಶನದ ನಂತರ ನಾನು ಏನಾದರೂ ಒಂದು ಕ್ರಮ ತೆಗೆದುಕೊಂಡು ಅಲ್ಲಿನ ಜನರಿಗೆ ಸಹಾಯ ಮಾಡಲಿಕ್ಕೆ ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆ ಮೇರೆಗೆ ಪ್ರಯತ್ನ ಮಾಡುತ್ತೇನೆ.